**ಸಾಕ್ಷಿಗೆ ದಿನಾಂಕಃ 06.03.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಪಾಟೀಸವಾಲು ಃ ಪ್ರತಿವಾದಿ 1(ಎ) ರಿಂದ 1(ಹೆಚ್) ಪರಃ ಶ್ರೀ. ವಿ ಆರ್ ಎನ್ ವಕೀಲರಿಂದ ಃ</u>**

ನಾನು ಈ ದಾವೆಯಲ್ಲಿ ಕುಲುಸಂಬಿ ರವರ ಮರಣ ಶಾಸನ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಮರಣ ಪ್ರಮಾಣಪತ್ರವನ್ನು ತೋರಿಸಿದ್ದು ಅದು ಕುಲುಸಂಬಿ ರವರ ಮರಣ ಪ್ರಮಾಣಪತ್ರ ಎಂದು

ಒಪ್ಪಿಕೊಂಡಿದ್ದರಿಂದ ಸದರಿ ಮರಣ ಪ್ರಮಾಣಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಪಿ-1 ನ್ನು ನಾನು ಸೃಷ್ಟಿ ಮಾಡಿರುತ್ತೇನೆ, ನನ್ನ ತಂದೆ ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕುಲುಸಂಬಿ ರವರ ಅವರ ಗಂಡ ತೀರಿ ಹೋದ ಎಷ್ಟು ದಿನಗಳ ನಂತರ ಪೀರುಸಾಬ್ ಅಂದರೆ ನನ್ನ ತಂದೆಯನ್ನು ಮದುವೆಯಾಗಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆಯನ್ನು ಕುಲುಸಂಬಿ ಮದುವೆಯಾಗುವ ಸಮಯದಲ್ಲಿ ಅವರಿಗೆ ಎಷ್ಟು ವಯಸ್ಸಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಪೀರುಸಾಬ್ ಮತ್ತು ಕುಲುಸಂಬಿ ಎಷ್ಟು ದಿನಗಳ ವರೆಗೆ ಒಟ್ಟಿಗೆ ಇದ್ದರು ಎಂದು ಹೇಳಲು ಆಗುವುದಿಲ್ಲ.

ನಿಪಿ-1 ರಲ್ಲಿ ಸ್ವತ್ತಿನ ವಿವರಗಳು, ಚೆಕ್ಕುಬಂಧಿ, ಸರ್ವೆ ನಂಬರ್ , ವಿಸ್ತೀರ್ಣ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಯಾವ ಉದ್ದೇಶಕ್ಕಾಗಿ ನನಗೆ ನೀಡಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ವಯಸ್ಸಾಗಿತ್ತು ಮತ್ತು ಖಾಯಿಲೆ ಇತ್ತು ಆದ ಕಾರಣ ನನಗೆ ನಿಪಿ-1 ಜಿ ಪಿ ಎ ಮಾಡಿಕೊಟ್ಟಿರುತ್ತಾರೆ. ನಿಪಿ-1 ರಲ್ಲಿ ಈ ಸಂಬಂಧ ನಮೂದು ಇರುವುದಿಲ್ಲ. ನನ್ನ ತಂದೆಗೆ ಆಂಗ್ಲ ಭಾಷೆ ಬರುತ್ತಿರಲಿಲ್ಲ ಎಂದರೆ ಸರಿ. ನಿಪಿ-1 ನ್ನು ಗಣಪತಿ ವಕೀಲರು ಮಾಡಿಸಿಕೊಟ್ಟಿರುತ್ತಾರೆ. ನಿಪಿ-1 ರಲ್ಲಿ ಗಣಪತಿ ವಕೀಲರು ಮಾಡಿಕೊಟ್ಟ ಹಾಗೆ ನಮೂದು ಇರುವುದಿಲ್ಲ. ನನ್ನ ತಂದೆಗೆ ಎಷ್ಟು ಜನ ಮಕ್ಕಳು ಮತ್ತು ಮೊಮ್ಮಕ್ಕಳು ಎಂದು ನಿಪಿ1 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಆಸ್ತಿ ಹೇಗೆ ಬಂತು ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಆಸ್ತಿಯು ಕುಲುಸಂಬಿ ರವರಿಗೆ ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ.

ನನ್ನ ತಾಯಿ ಕೈರುನ್ನೀಸಾ ಬದುಕಿರುವಾಗ ನನ್ನ ಜೊತೆ ವಾಸವಾಗಿದ್ದರು. ನನ್ನ ತಂದೆ ಬದುಕಿರುವಾಗ ನನ್ನ ಜೊತೆ ವಾಸವಾಗಿದ್ದರು. ನನ್ನ ಅಕ್ಕ ಸುಫಿಯಾಬಿ ಅವರ ಗಂಡನ ಜೊತೆ ಭಕ್ತಂಪುರದಲ್ಲಿ ವಾಸವಾಗಿರುತ್ತಾರೆ. ದಿಲ್‌ಶದ್ ಬಾನು ಅವರ ಗಂಡನ ಜೊತೆ ವಾಸವಾಗಿರುತ್ತಾರೆ. ದಾವಾ ಸ್ವತ್ತು ಅಸೆಸ್ಮೆಂಟ್ ನಂಃ 520/507 ರಲ್ಲಿ ಕೈರುನ್ನೀಸಾ ಹಾಗೂ ಅವರ ಮಕ್ಕಳಾದ ಫಾಜಿಲ್, ಪೌಸಿಯಾ, ಸಾಜಿಯಾ ರವರು ವಾಸವಾಗಿರುತ್ತಾರೆಂದರೆ ಸರಿ. ಕೈರುನ್ನೀಸಾ ಮದುವೆಯಾದಾಗಿನಿಂದಲೂ ಸದರಿ ದಾವಾ ಸ್ವತ್ತಿನಲ್ಲಿ ವಾಸವಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳಿಂದ ವಾಸವಾಗಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯು ಮೊದಲಿಗೆ ಇಬ್ರಾಹಿಂ ಸಾಹೇಬ್ ರವರಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ಕುಲುಸಂಬಿ ರವರಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಇಬ್ರಾಹಿಂ ಪೌತಿಯಾದ ನಂತರ

ಅವರ ಹೆಂಡತಿ ಹನೀಫಾಬಿ ರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಹನೀಫಾಬಿ ರವರ ಹೆಣ್ಣು ಮಕ್ಕಳಾದ ಪ್ರತಿವಾದಿ 2 ರಿಂದ 7 ರವರಿಗೆ ತನ್ನ ತಾಯಿ ಹನೀಫಾಬಿ ಖರ್ಚು ಮಾಡಿ ಮದುವೆ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ಕೇವಲ ಹನೀಫಾಬಿ ರವರ ಗಂಡು ಮಕ್ಕಳಾದ ಶೇಖ್ ಅಹಮ್ಮದ್ ಮತ್ತು ಬಷಿರ್ ಅಹಮ್ಮದ್ ರವರಿಗೆ ಸೇರಬೇಕಾಗುತ್ತದೆ ಎಂದರೆ ಸರಿಯಲ್ಲ.

ಶೇಖ್ ಅಹಮ್ಮದ್ ರವರ ಹೆಂಡತಿ ಶಕೀಲಾಬಿ ಮತ್ತು ಮಕ್ಕಳಾದ ಶಬೀನಾ ರವರು ಈಗ ಎಲ್ಲಿ ಇದ್ದಾರೋ ನನಗೆ ಗೊತ್ತಿಲ್ಲ. ಶೇಖ್ ಅಹಮ್ಮದ್ ರವರ 2 ನೇ ಹೆಂಡತಿ ಹೆಸರು ರಮಲತ್ ಎಂದರೆ ಸರಿ. ಸದರಿ ರಮಲತ್ ರವರಿಗೆ ಮಕ್ಕಳಾದ ಪ್ರತಿವಾದಿ 1(ಸಿ) ಮತ್ತು 1(ಡಿ) ಕಾರ್ಕಳದಲ್ಲಿ ವಾಸವಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಹನೀಫಾಬಿ ಗಂಡ ಇಬ್ರಾಹಿಂ ಸಾಬ್ ರವರು ಪೌತಿಯಾಗಿದ್ದು ಅವರ ಮಗ ಬಷಿರ್ ಅಹಮ್ಮದ್ ರವರು ನಿಧನ ಹೊಂದಿ ಅವರ ಹೆಂಡತಿ ಕೈರುನ್ನೀಸಾ ದಾವಾ ಆಸ್ತಿಯಲ್ಲಿ ಮಕ್ಕಳ ಜೊತೆ ವಾಸವಾಗಿರುತ್ತಾರೆಂದರೆ ಸಾಕ್ಷಿಯು ವಾಸವಾಗಿರುತ್ತಾರೆ ಎಂದಿನಿಂದ ವಾಸವಾಗಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಇಬ್ರಾಹಿಂ ಸಾಹೇಬ್ ನಿಧನ ಹೊಂದಿದ್ದರಿಂದ ಅವರ ಗಂಡು ಮಕ್ಕಳಾದ ಶೇಖ್ ಅಹಮ್ಮದ್ ಮತ್ತು ಬಷಿರ್ ಅಹಮ್ಮದ್ ರವರಿಗೆ ಮಾತ್ರ ದಾವಾ ಆಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಸುಮಾರು 5 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಯಲ್ಲಿ ಕೈರುನ್ನೀಸಾ ವಾಸವಾಗಿರುವ ಮೊದಲೇ ಅವರ ಗಂಡ ಬಷಿರ್ ಅಹಮ್ಮದ್ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೈರುನ್ನೀಸಾ ನನಗೆ ದಾಯಾದಿ ಆಗಬೇಕು. ದಾವಾ ಆಸ್ತಿಯು ಕೈರುನ್ನೀಸಾ ರವರ ಮಾವ ಅಂದರೆ ಬಷಿರ್ ಅಹಮ್ಮದ್ ರವರ ತಂದೆ ಇಬ್ರಾಹಿಂ ಸಾಹೇಬ್ ರವರ ಸರ್ಯಾಜಿತ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತು ಯಾರಿಗೂ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕುಲುಸಂಬಿ ರವರಿಗೆ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮಂಜೂರಾಗಿರುವ ಬಗ್ಗೆ ದಾಖಲೆಗಳನ್ನು ನೀಡಿರುತ್ತೇನೆ. ದಾವಾ ಆಸ್ತಿಯು ಶೃಂಗೇರಿ ಗ್ರಾಮದ ಸರ್ವೆ ನಂಃ 223 ರಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಗೆ ಯಾವುದೇ ಸರ್ವೆ ನಂಬರ್ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯು ಸರ್ವೆ ನಂಃ 223 ರಲ್ಲಿ ಇದ್ದು ಅದು ಒಟ್ಟು ವಿಸ್ತೀರ್ಣ 1 ಎಕರೆ 5 ಗುಂಟೆ ಇದ್ದು ಅದು ವಿದ್ಯಾರಣ್ಯಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮಂಜೂರಾಗಬೇಕೆಂದು ಕೈರುನ್ನೀಸಾ 94 ಸಿ ಅರ್ಜಿ

ಸಲ್ಲಿಸಿರುತ್ತಾರೆಂದರೆ ಸಾಕ್ಷಿಯು ಸೃಷ್ಟಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯು ಕೈರುನ್ನೀಸಾ ರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹನೀಫಾಬಿ ಪೌತಿಯಾಗಿರುತ್ತಾರೆಂದರೆ ಸರಿ. ಇಬ್ರಾಹಿಂ ಸಾಬ್ ರವರಿಗೆ 8 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ದಾವೆ ತರುವ ಸಮಯದಲ್ಲಿ ಇಬ್ರಾಹಿಂ ಸಾಹೇಬ್ ರವರ ಮೊದಲ ಹೆಂಡತಿಯಾದ ಶಕೀಲಾಬಿ ರವರ ಮಗಳಾದ ಶಬೀನಾ ರವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಂದು ದಾವೆ ತರುವ ಸಮಯದಲ್ಲಿ ಹನೀಫಾಬಿ ಜೀವಂತ ಇದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಪೌತಿಯಾದ ನಂತರ ಶಬೀನಾ ರವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. ಅಗತ್ಯ ಪಕ್ಷಗಾರರನ್ನು ಈ ದಾವೆಯಲ್ಲಿ ತಂದಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-1 ನ್ನು ನನ್ನ ತಂದೆ ನನಗೆ ನೀಡುವಾಗ ಅವರಿಗೆ 93 ವರ್ಷ ಆಗಿರುತ್ತದೆ. ನಿಪಿ-9 ವಿಲ್ ಆಗುವ ಸಮಯದಲ್ಲಿ ಕುಲುಸಂಬಿ ರವರಿಗೆ ಎಷ್ಟು ವಯಸ್ಸಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆ-ತಾಯಿಯ ಮದುವೆ ಯಾವ ಸಾಲಿನಲ್ಲಿ ಆಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ವಿಲ್ ಬರೆಯುವ ಸಮಯದಲ್ಲಿ ನನ್ನ ತಂದೆಗೆ ಎಷ್ಟು ವಯಸ್ಸಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನಾನು ನಿಪಿ-9 ವಿಲ್ ನ್ನು ಸೃಷ್ಟಿ ಮಾಡಿ ಈ ದಾವೆ ತಂದಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಯು ಅವರ ತಂದೆಯಾದ ಇಮಾಮ್ ಸಾಬ್ ರವರ ಸ್ವತ್ತು ಎಂದು ಗ್ರಾಮ ಪಂಚಾಯ್ತಿಗೆ ಅರ್ಜಿ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ಅರ್ಜಿಗೆ ಸಂಬಂಧಿಸಿ ವಕೀಲರಾದ ಶಶಿಭೂಷಣ್ ರವರಿಂದ ಕಾನೂನು ಸಲಹೆ ಪಡೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಸಲಹೆಯಲ್ಲಿ ವಕೀಲರು ದಿನಾಂಕಃ24.06.1974 ರಲ್ಲಿ ಕುಲಸಂಬಿ ರವರು ಮರಣ ಶಾಸನವನ್ನು ಬರೆದಿರುತ್ತಾರೆ ಎಂದು ಸದರಿ ಸಲಹೆಯಲ್ಲಿ ತೋರಿಸಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಮರಣ ಶಾಸನವನ್ನು ತೋರಿಸಿ 1974 ರಲ್ಲಿ ಕುಲುಸಂಬಿ ರವರು ಮರಣಶಾಸನವನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಒಪ್ಪಿರುವುದಿಲ್ಲ. ಸದರಿ ನಿಪಿ-9 ರ ಮೇಲೆ ಖಾತೆ ಬದಲಾವಣೆಗಾಗಿ ಗ್ರಾಮ ಪಂಚಾಯ್ತಿಯಲ್ಲಿ ನನ್ನ ತಂದೆ ಹೆಸರಿನಲ್ಲಿ ನಾನೇ ನಕಲು ದಾಖಲೆಗಳನ್ನು ಒದಗಿಸಿ ಅರ್ಜಿ ನೀಡಿರುತ್ತೇನೆಂದರೆ ಸರಿಯಲ್ಲ.

ನನ್ನ ತಂದೆಯಾಗಲೀ ನನ್ನ ತಾಯಿಯಾಗಲೀ ಅವರ ಜೀವಿತ ಕಾಲದಲ್ಲಿ ನಾವು ಭಾಗವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಸ್ವತಃ ದುರದ್ದೇಶದಿಂದ ಈ ಸುಳ್ಳು ದಾವೆ ತಂದಿರುತ್ತೇನೆಂದರೆ ಸರಿಯಲ್ಲ.

ಕುಲುಸಂಬಿ ರವರು ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆ ಎಂದು ಮತ್ತು ಅವರಿಗೆ ಆ ಸಮಯದಲ್ಲಿ ಎಷ್ಟು ವಯಸ್ಸಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು 1998 ರಲ್ಲಿ ಕುಲುಸಂಬಿ ರವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1 ರಂತೆ ಕುಲುಸಂಬಿ ರವರು1977 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ನಿಡಿ-1 ನ್ನು ತಿದ್ದುಪಡಿ ಮಾಡಿ 1998 ಎಂದು ತಿದ್ದುಪಡಿ ಮಾಡಿ ಗ್ರಾಮ ಪಂಚಾಯ್ತಿಯಲ್ಲಿ ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

**(ದಿನಾಂಕಃ 06.03.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**